ನೇಗಿಲ ಮೇಲೆಯೇ ನಿಂತಿದೆ ಧರ್ಮ

ವಾರ್ಷಿಕ ವರದಿ

ANNUAL REPORT

2025-26



ಕೆಳದಿ ಶಿವಪ್ಪ ನಾಯಕ
ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

Keladi Shivappa Nayaka
University of Agricultural and Horticultural Sciences
Shivamogga



ಸ್ನಾತಕೋತ್ತರ ಸಂಶೋಧನಾ ಸಮ್ಮೇಳನ

PG Research Conference



"ಪುಷ್ಪ ಕೃಷಿ ಮತ್ತು ಉದ್ಯಾನ ವಿನ್ಯಾಸ @2047: ವಿಕಸಿತ ಭಾರತ"
ಕುರಿತ ರಾಷ್ಟ್ರೀಯ ಸಮ್ಮೇಳನ

National Conference on
"Floriculture and Landscaping @2047: Viksit Bharat"

ಕೆಳದಿ ಶಿವಪ್ಪ ನಾಯಕ
ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಶಿವಮೊಗ್ಗ

Keladi Shivappa Nayaka
University of Agricultural and Horticultural Sciences
Shivamogga





ವಾರ್ಷಿಕ ವರದಿ
ANNUAL REPORT

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಇರುವಕ್ಕಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಕರ್ನಾಟಕ – 577 412

ANNUAL REPORT 2025-26

EDITORIAL COMMITTEE

Patron : **Dr. M V Dhananjaya**
Hon'ble Vice Chancellor

Compiled and Edited by

Chairman : **Dr. B Hemla Naik**
Director of Education

Co - Chairman : **Dr. Jayalaxmi Narayan Hegde**
Nodal Officer, ICAR Education Division cum
PME Cell

: **Dr. Usha T N**
Associate Professor (Seed Science and Technology)
PME Cell

: **Dr. Mallikarjuna M C**
Assistant Professor (Kannada)
University Communication Centre

: **Dr. Shruti Nayak**
Assistant Professor (Food and Nutrition)
PME Cell

Typing, Layout and Design : **Mr. Gangadhar Bhat K**
Mr. Lokesha G K
Mr. Prajwal S
Kumari Anusha S
(PME Cell Staff)

ವಾರ್ಷಿಕ ವರದಿ 2025–26

ಸಂಪಾದಕೀಯ ಸಮಿತಿ

ಪೋಷಕರು	:	ಡಾ. ಎಂ ವಿ ಧನಂಜಯ ಗೌರವಾನ್ವಿತ ಕುಲಪತಿಗಳು
ಸಂಕಲನ ಮತ್ತು ಸಂಪಾದನೆ		
ಅಧ್ಯಕ್ಷರು	:	ಡಾ. ಬಿ ಹೇಮ್ಲಾ ನಾಯಕ್ ಶಿಕ್ಷಣ ನಿರ್ದೇಶಕರು
ಸಹ ಅಧ್ಯಕ್ಷರು	:	ಡಾ. ಜಯಲಕ್ಷ್ಮೀ ನಾರಾಯಣ ಹೆಗಡೆ ನೋಡಲ್ ಅಧಿಕಾರಿಗಳು, ಭಾ.ಕೃ.ಅ.ಪ. ಶಿಕ್ಷಣ ವಿಭಾಗ ಮತ್ತು ಪಿ.ಎಂ.ಇ. ಘಟಕ
	:	ಡಾ. ಉಷಾ ಟಿ ಎನ್ ಸಹ ಪ್ರಾಧ್ಯಾಪಕರು (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ) ಪಿ.ಎಂ.ಇ. ಘಟಕ
	:	ಡಾ. ಮಲ್ಲಿಕಾರ್ಜುನ ಎಂ ಸಿ ಸಹಾಯಕ ಪ್ರಾಧ್ಯಾಪಕರು (ಕನ್ನಡ) ವಿಶ್ವವಿದ್ಯಾಲಯದ ಸಂವಹನ ಕೇಂದ್ರ
	:	ಡಾ. ಶೃತಿ ನಾಯಕ ಸಹಾಯಕ ಪ್ರಾಧ್ಯಾಪಕರು (ಆಹಾರ ಮತ್ತು ಪೋಷಣೆ) ಪಿ.ಎಂ.ಇ. ಘಟಕ
ಬೆರಳಚ್ಚು, ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ	:	ಶ್ರೀ ಗಂಗಾಧರ ಭಟ್ ಕೆ ಶ್ರೀ ಲೋಕೇಶ ಜಿ ಕೆ ಶ್ರೀ ಪ್ರಜ್ವಲ್ ಎಸ್ ಕುಮಾರಿ ಅನುಷಾ ಎಸ್ (ಪಿ.ಎಂ.ಇ. ಘಟಕ ಸಿಬ್ಬಂದಿ)

Preface



It gives me an immense pleasure to present the 13th Annual Report of the Keladi Shivappa Nayaka University of Agricultural and Horticultural Sciences (KSNUAHS), Shivamogga for the academic year 2025-26. This report reflects not only the University's achievements during the year, but also our unwavering commitment to excellence in agricultural education, research, extension and innovation. Recognized by the University Grants Commission (UGC), New Delhi, and accredited along with its constituent colleges, by the National Agricultural Education Accreditation Board (NAEAB) of the Indian Council of Agricultural Research (ICAR), New Delhi**,** the University continues to uphold the highest standards of academic quality and institutional excellence.

Agriculture today stands at a critical juncture facing unprecedented challenges arising from climate change, natural resource degradation, market uncertainties and evolving food and nutritional demands. At the same time, rapid advancements in biotechnology, digital agriculture, precision farming, artificial intelligence and data-driven technologies are opening new avenues for agricultural transformation. In this dynamic environment, KSNUAHS continues to serve as a centre of excellence, fostering innovation, generating scientific knowledge and developing sustainable technologies that empower farmers, strengthen rural livelihoods and contribute to national food and nutritional security.

Since its establishment, the University has made remarkable progress in building competent human resources for the agricultural sector. It has produced 5,046 graduates in the disciplines of Agriculture (1,443), Horticulture (1,710) and Forestry (761). Of these, 3,914 have completed undergraduate programmes, 1,000 have earned master's degree and 132 have obtained doctoral degrees. In recognition of academic excellence, the University has awarded 329 Gold Medals to 246 meritorious undergraduate and postgraduate students. Reflecting the high quality of education imparted, 158 students have secured ICAR Junior Research Fellowships, while 34 students have been awarded ICAR Senior Research Fellowships**.**

The University has consistently pursued excellence in research by developing innovative technologies that address the emerging needs of farmers and the agricultural sector. It has released high yielding varieties in 22 crops and developed 40 production technologies**,** 43 plant protection technologies**,** 28 farm mechanization innovations**,** 39 horticultural technologies**,** one food science technologies**,** seven post-harvest technology and two inland fisheries technologies**,** thereby making significant contributions to agricultural and horticultural development across the region.

The University's seed production programme has achieved remarkable success by producing 72,598 quintals of quality seeds and 79,30,337 lakhs planting materials**,** which have been distributed to farmers and other stakeholders. The University has also processed and marketed more than 11,570.50 kgs of honey**.** In support of sustainable agriculture, 2,75,531 of bio-agents and bio-fertilizers have been produced and supplied to the farming communities, promoting environmentally sustainable and economically viable farming practices.

Research continues to be one of the University's greatest strengths. Since its establishment, the University has implemented 324 adhoc research projects**,** 386 testing projects involving new chemicals and crop varieties and 17 All India Coordinated Research Projects (AICRPs)**.** These initiatives are supported by a network of 14 research stations**,** which play a vital role in developing location-specific technologies suited to diverse agro-climatic conditions.

Extension education remains the cornerstone of the University's mandate. Through its ICAR-Krishi Vigyan Kendras (KVKs)**,** Farmers' Training Institute and Extension Education Units, the University has effectively disseminated scientific knowledge and improved technologies to the farming communities. These efforts have resulted in the conduct of 179 On Farm Trials (OFTs)**,** 646 Frontline Demonstrations (FLDs)**,** 2,088 on-campus training programmes**,** 2,211 off-campus training programmes, 347 vocational, 359 sponsored and 273 skill-oriented training programmes for the farmers and extension personnel. Collectively, these initiatives benefit nearly four lakh farmers annually**.** In addition, the University has analysed 60,021 soil samples and 25,780 water samples**,** providing valuable scientific recommendations for efficient soil and water management and improved farm productivity.

The University remains committed to fostering innovation, entrepreneurship and skill development among youth. In alignment with the aspirations of the National Education Policy (NEP), we continue to strengthen experiential learning, multidisciplinary education, industry collaboration and start-up promotion. Greater emphasis is being placed on emerging areas such as precision agriculture, climate-smart technologies, drone applications, artificial intelligence, digital agriculture, value addition, agri-business management and natural resource conservation to prepare our graduates for the future of agriculture.

As we move forward, KSNUAHS will continue to strengthen interdisciplinary research, national and international collaborations, industry partnerships and community engagement. Our vision is to emerge as a globally recognized centre of excellence that contributes significantly to agricultural transformation, food security, environmental sustainability, climate resilience and rural prosperity in Karnataka and beyond.

With renewed determination, a shared vision, and an unwavering commitment to excellence, I am confident that KSNUAHS, Shivamogga will continue to make meaningful contributions towards sustainable agricultural development, food and nutritional security, environmental conservation and the prosperity of farming communities. Together, we shall strive to build a resilient, innovative, and sustainable agricultural future for generations to come.

The achievements documented in this report have been made possible through the unwavering dedication and collective efforts of our faculty, scientists, officers, staff, students, alumni, farmers, funding agencies, collaborating institutions and well-wishers. I express my sincere appreciation to each one of them for their invaluable contributions to the growth and success of the University. I also place on record my appreciation to the Editorial Committee for their meticulous efforts in compiling and presenting this Annual Report.

With Best Wishes,



Date : 29-07-2026
Place : Shivamogga

(M V Dhananjaya)
Vice Chancellor

ಮುನ್ನುಡಿ



ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 2025–26ರ ಶೈಕ್ಷಣಿಕ ವರ್ಷದ 13ನೇ ವಾರ್ಷಿಕ ವರದಿಯನ್ನು ಪ್ರಸ್ತುತಪಡಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ಈ ವರದಿಯು ಕೇವಲ ಪ್ರಸಕ್ತ ವರ್ಷದಲ್ಲಿ ವಿಶ್ವವಿದ್ಯಾಲಯವು ಸಾಧಿಸಿದ ಯಶಸ್ಸನ್ನು ಮಾತ್ರವಲ್ಲದೆ, ಕೃಷಿ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ನಾವೀನ್ಯತೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಲು ನಮಗಿರುವ ಅಚಲವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ನವದೆಹಲಿಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ (ಯುಜಿಸಿ) ಮಾನ್ಯತೆ ಪಡೆದಿದ್ದು ಹಾಗೂ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐಸಿಎಆರ್) ರಾಷ್ಟ್ರೀಯ ಕೃಷಿ ಶಿಕ್ಷಣ ಮಾನ್ಯತಾ ಮಂಡಳಿಯಿಂದ (ಎನ್ಎಇಎಬಿ) ತನ್ನ ಎಲ್ಲಾ ಸಾಂಸ್ಥಿಕ ಮಹಾವಿದ್ಯಾಲಯಗಳಿಗೆ ಮಾನ್ಯತೆ ಪಡೆದಿರುವ ನಮ್ಮ ವಿಶ್ವವಿದ್ಯಾಲಯವು, ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸದಾ ಕಾಯ್ದುಕೊಂಡು ಬಂದಿರುತ್ತದೆ.

ಇಂದಿನ ಕೃಷಿ ಕ್ಷೇತ್ರವು ಹವಾಮಾನ ಬದಲಾವಣೆ, ನೈಸರ್ಗಿಕ ಸಂಪನ್ಮೂಲಗಳ ಕೊರತೆ, ಮಾರುಕಟ್ಟೆಯ ಅನಿಶ್ಚಿತತೆ ಹಾಗೂ ಬದಲಾಗುತ್ತಿರುವ ಆಹಾರ ಮತ್ತು ಪೌಷ್ಟಿಕಾಂಶದ ಬೇಡಿಕೆಗಳಿಂದ ಉಂಟಾಗುವ ಅಭೂತಪೂರ್ವ ಸವಾಲುಗಳನ್ನು ಎದುರಿಸುತ್ತಾ ಒಂದು ನಿರ್ಣಾಯಕ ಘಟ್ಟದಲ್ಲಿದೆ. ಇದೇ ಕಾಲಕ್ಕೆ, ಜೈವಿಕ ತಂತ್ರಜ್ಞಾನ, ಡಿಜಿಟಲ್ ಕೃಷಿ, ನಿಖರ ಕೃಷಿ, ಕೃತಕ ಬುದ್ಧಿಮತ್ತೆ (ಎಐ) ಮತ್ತು ದತ್ತಾಂಶ ಆಧಾರಿತ ತಂತ್ರಜ್ಞಾನಗಳಲ್ಲಿನ ಕ್ಷಿಪ್ರ ಪ್ರಗತಿಯು ಕೃಷಿ ರೂಪಾಂತರಕ್ಕೆ ಹೊಸ ಮಾರ್ಗಗಳನ್ನು ಮುಕ್ತಗೊಳಿಸುತ್ತಿದೆ. ಇಂತಹ ಕ್ರಿಯಾತ್ಮಕ ವಾತಾವರಣದಲ್ಲಿ, ಕೆ.ಶಿ.ನಾ.ಕೃ.ತೋ.ವಿ.ವಿ.ಯು ಅತ್ಯುತ್ತಮ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಾ, ನಾವೀನ್ಯತೆಯನ್ನು ಉತ್ತೇಜಿಸುತ್ತಿದೆ. ಜೊತೆಗೆ ವೈಜ್ಞಾನಿಕ ಜ್ಞಾನವನ್ನು ಸೃಷ್ಟಿಸುತ್ತಾ, ರೈತರನ್ನು ಸಬಲೀಕರಿಸುವ, ಗ್ರಾಮೀಣ ಜೀವನೋಪಾಯವನ್ನು ಬಲಪಡಿಸುವ ಮತ್ತು ರಾಷ್ಟ್ರೀಯ ಆಹಾರ ಹಾಗೂ ಪೌಷ್ಟಿಕಾಂಶದ ಭದ್ರತೆಗೆ ಕೊಡುಗೆ ನೀಡುವ ಸುಸ್ಥಿರ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿದೆ.

ವಿಶ್ವವಿದ್ಯಾಲಯವು ಸ್ಥಾಪನೆಯಾದ ದಿನದಿಂದಲೂ ಕೃಷಿ ಕ್ಷೇತ್ರಕ್ಕೆ ಸಮರ್ಥ ಮಾನವ ಸಂಪನ್ಮೂಲವನ್ನು ರೂಪಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸುತ್ತಿದೆ. ಇದು ಕೃಷಿ (1,443), ತೋಟಗಾರಿಕೆ (1,710) ಮತ್ತು ಅರಣ್ಯ (761) ವಿಭಾಗಗಳಲ್ಲಿ ಒಟ್ಟು 5,046 ಪದವೀಧರರನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದೆ. ಇವರಲ್ಲಿ 3,914 ವಿದ್ಯಾರ್ಥಿಗಳು ಪದವಿ (ಸ್ನಾತಕ ಪದವಿ) ಕಾರ್ಯಕ್ರಮಗಳನ್ನು, 1,000 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯನ್ನು ಮತ್ತು 132 ವಿದ್ಯಾರ್ಥಿಗಳು ಡಾಕ್ಟರೇಟ್ ಪದವಿಯನ್ನು ಪೂರ್ಣಗೊಳಿಸಿದ್ದಾರೆ. ಶೈಕ್ಷಣಿಕ ಶ್ರೇಷ್ಠತೆಯನ್ನು ಗೌರವಿಸುವ ನಿಟ್ಟಿನಲ್ಲಿ, ವಿಶ್ವವಿದ್ಯಾಲಯವು ಅರ್ಹ 246 ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 329 ಚಿನ್ನದ ಪದಕಗಳನ್ನು ನೀಡಿ ಗೌರವಿಸಿದೆ. ಇಲ್ಲಿ ನೀಡಲಾಗುತ್ತಿರುವ ಉತ್ತಮ ಗುಣಮಟ್ಟದ ಶಿಕ್ಷಣದ ಪ್ರತಿಫಲವಾಗಿ, 158 ವಿದ್ಯಾರ್ಥಿಗಳು ಐಸಿಎಆರ್ ಕಿರಿಯ ಸಂಶೋಧನಾ ಫೆಲೋಶಿಪ್‌ಗಳನ್ನು (ಜೆಆರ್ಎಫ್) ಮತ್ತು 34 ವಿದ್ಯಾರ್ಥಿಗಳ ಐಸಿಎಆರ್–ಹಿರಿಯ ಸಂಶೋಧನಾ ಫೆಲೋಶಿಪ್‌ಗಳನ್ನು (ಎಸ್ಆರ್ಎಫ್) ಪಡೆದುಕೊಂಡಿದ್ದಾರೆ.

ರೈತರ ಮತ್ತು ಕೃಷಿ ಕ್ಷೇತ್ರದ ಉದಯೋನ್ಮುಖ ಅಗತ್ಯಗಳನ್ನು ಪೂರೈಸುವ ನವೀನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮೂಲಕ ವಿಶ್ವವಿದ್ಯಾಲಯವು ಸಂಶೋಧನೆಯಲ್ಲಿ ನಿರಂತರವಾಗಿ ಶ್ರೇಷ್ಠತೆಯನ್ನು ಕಾಯ್ದುಕೊಂಡಿದೆ. ಇದು ಒಟ್ಟು 22 ಬೆಳೆಗಳಲ್ಲಿ ಅತಿ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಬಿಡುಗಡೆ ಮಾಡಿದೆ. ಅಲ್ಲದೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮೂಲಕ ಈ ಭಾಗದ ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿದೆ. 46 ಉತ್ಪಾದನಾ ತಂತ್ರಜ್ಞಾನಗಳು, 31 ಸಸ್ಯ ಸಂರಕ್ಷಣಾ ತಂತ್ರಜ್ಞಾನಗಳು, 29 ಕೃಷಿ ಯಾಂತ್ರೀಕರಣ ಆವಿಷ್ಕಾರಗಳು, 39 ತೋಟಗಾರಿಕಾ ತಂತ್ರಜ್ಞಾನಗಳು, 1 ಆಹಾರ ವಿಜ್ಞಾನ ತಂತ್ರಜ್ಞಾನಗಳು, 7 ಕೊಯ್ಲೋತ್ತರ ತಂತ್ರಜ್ಞಾನ , 2 ಒಳನಾಡು ಮೀನುಗಾರಿಕೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿರುತ್ತದೆ.

ವಿಶ್ವವಿದ್ಯಾಲಯವು ಬೀಜೋತ್ಪಾದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 72,598 ಕ್ವಿಂಟಾಲ್ ಗುಣಮಟ್ಟದ ಬಿತ್ತನೆ ಬೀಜಗಳು ಮತ್ತು 79,30,337 ಲಕ್ಷ ಬಿತ್ತನೆ ಸಾಮಗ್ರಿಗಳನ್ನು ಉತ್ಪಾದಿಸುವ ಮೂಲಕ ಅದ್ಭುತ ಯಶಸ್ಸನ್ನು ಸಾಧಿಸಿರುತ್ತದೆ. ಇವುಗಳನ್ನು ರೈತರಿಗೆ ಮತ್ತು ಇತರ ಪಾಲುದಾರರಿಗೆ ವಿತರಿಸಲಾಗಿದೆ. ವಿಶ್ವವಿದ್ಯಾಲಯವು 11,570.50 ಕೆ.ಜಿ. ಹೆಚ್ಚು ಜೇನುತುಪ್ಪವನ್ನು ಸಂಸ್ಕರಿಸಿ ಮಾರಾಟ ಮಾಡಿದೆ. ಸುಸ್ಥಿರ ಕೃಷಿಗೆ ಬೆಂಬಲವಾಗಿ, ಪರಿಸರ ಸ್ನೇಹಿ ಮತ್ತು ಆರ್ಥಿಕವಾಗಿ ಲಾಭದಾಯಕವಾದ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು 2,75,531 ಕೆ.ಜಿ. ಜೈವಿಕ ಏಜೆಂಟ್‌ಗಳು ಮತ್ತು ಜೈವಿಕ ಗೊಬ್ಬರಗಳನ್ನು ಉತ್ಪಾದಿಸಿ ರೈತ ಸಮುದಾಯಗಳಿಗೆ ಪೂರೈಸಲಾಗಿದೆ. ಸಂಶೋಧನೆಯು ವಿಶ್ವವಿದ್ಯಾಲಯದ ಅತಿ ದೊಡ್ಡ ಶಕ್ತಿಗಳಲ್ಲಿ ಒಂದಾಗಿ ಮುಂದುವರಿದಿದೆ.

ಸ್ಥಾಪನೆಯಾದಾಗಿನಿಂದ, ವಿಶ್ವವಿದ್ಯಾಲಯವು 324 ತಾತ್ಪೂರ್ಕಿಕ ಸಂಶೋಧನಾ ಯೋಜನೆಗಳನ್ನು, ಹೊಸ ರಾಸಾಯನಿಕಗಳು ಮತ್ತು ಬೆಳೆ ತಳಿಗಳನ್ನು ಒಳಗೊಂಡ 386 ಪರೀಕ್ಷಾ ಯೋಜನೆಗಳನ್ನು ಮತ್ತು 17 ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಈ ಉಪಕ್ರಮಗಳಿಗೆ 14 ಸಂಶೋಧನಾ ಕೇಂದ್ರಗಳ ಜಾಲವು ಬೆಂಬಲ ನೀಡುತ್ತಿದ್ದು, ಇವು ವಿವಿಧ ಕೃಷಿ-ಹವಾಮಾನ ಪರಿಸ್ಥಿತಿಗಳಿಗೆ ಸೂಕ್ತವಾದ ಸ್ಥಳೀಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ವಿಸ್ತರಣಾ ನಿರ್ದೇಶನಾಲಯವು ವಿಶ್ವವಿದ್ಯಾಲಯದ ಪ್ರಮುಖ ಧ್ಯೇಯೋದ್ದೇಶಗಳ ತಳಹದಿಯಾಗಿದೆ. ತನ್ನ ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರಗಳು, ರೈತ ತರಬೇತಿ ಸಂಸ್ಥೆ ಮತ್ತು ವಿಸ್ತರಣಾ ಶಿಕ್ಷಣ ಘಟಕಗಳ ಮೂಲಕ, ವಿಶ್ವವಿದ್ಯಾಲಯವು ವೈಜ್ಞಾನಿಕ ಜ್ಞಾನ ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ರೈತ ಸಮುದಾಯಗಳಿಗೆ ಪರಿಣಾಮಕಾರಿಯಾಗಿ ತಲುಪಿಸುತ್ತಿದೆ. ಈ ಪ್ರಯತ್ನಗಳ ಫಲವಾಗಿ 179 ಆವರಣ ಕ್ಷೇತ್ರ ಪ್ರಯೋಗಗಳು, 646 ಮುಂಚೂಣಿ ಪ್ರಾತ್ಯಕ್ಷಿಕೆಗಳು, 2,088 ಆವರಣ ತರಬೇತಿ ಕಾರ್ಯಕ್ರಮಗಳು, 2,211 ಆವರಣೇತರ ತರಬೇತಿ ಕಾರ್ಯಕ್ರಮಗಳು, ರೈತರು ಮತ್ತು ವಿಸ್ತರಣಾ ಸಿಬ್ಬಂದಿಗಾಗಿ 347 ವೃತ್ತಿಪರ, 359 ಪ್ರಾಯೋಜಿತ ಮತ್ತು 273 ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಈ ಎಲ್ಲಾ ಉಪಕ್ರಮಗಳ ಮೂಲಕ ವಾರ್ಷಿಕವಾಗಿ ಸುಮಾರು ನಾಲ್ಕು ಲಕ್ಷ ರೈತರು ಪ್ರಯೋಜನವನ್ನು ಪಡೆದಿರುತ್ತಾರೆ. ಇದಲ್ಲದೆ, ಸಮರ್ಥ ಮಣ್ಣು ಮತ್ತು ನೀರಿನ ನಿರ್ವಹಣೆ ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಅಮೂಲ್ಯವಾದ ವೈಜ್ಞಾನಿಕ ಶಿಫಾರಸುಗಳನ್ನು ಒದಗಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು 60,021 ಮಣ್ಣಿನ ಮಾದರಿಗಳನ್ನು ಮತ್ತು 25,780 ನೀರಿನ ಮಾದರಿಗಳನ್ನು ವಿಶ್ಲೇಷಿಸಿರುತ್ತದೆ.

ಯುವಕರಲ್ಲಿ ನಾವೀನ್ಯತೆ, ಉದ್ಯಮಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ವಿಶ್ವವಿದ್ಯಾಲಯವು ಬದ್ಧವಾಗಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ, ನಾವು ಪ್ರಾಯೋಗಿಕ ಕಲಿಕೆ, ಬಹುಶಿಸ್ತೀಯ ಶಿಕ್ಷಣ, ಉದ್ಯಮದ ಸಹಯೋಗ ಮತ್ತು ಸ್ಟಾರ್ಟ್-ಅಪ್ ಉತ್ತೇಜನವನ್ನು ಬಲಪಡಿಸುವುದನ್ನು ಮುಂದುವರಿಸಿದ್ದೇವೆ. ನಮ್ಮ ಪದವೀಧರರನ್ನು ಭವಿಷ್ಯದ ಕೃಷಿಗೆ ಸಿದ್ಧಗೊಳಿಸಲು ನಿಖರ ಕೃಷಿ, ಹವಾಮಾನ-ಸ್ಮಾರ್ಟ್ ತಂತ್ರಜ್ಞಾನಗಳು, ಡ್ರೋನ್ ಅಪ್ಲಿಕೇಶನ್‌ಗಳು, ಕೃತಕ ಬುದ್ಧಿಮತ್ತೆ, ಡಿಜಿಟಲ್ ಕೃಷಿ, ಮೌಲ್ಯವರ್ಧನೆ, ಕೃಷಿ-ವ್ಯವಹಾರ ನಿರ್ವಹಣೆ ಮತ್ತು ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಯಂತಹ ಉದಯೋನ್ಮುಖ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಮುನ್ನಡೆಯುತ್ತಿರುವ, ಕೆ.ಶಿ.ನಾ.ಕೃ.ತೋ.ವಿ.ವಿ. ಸಂಸ್ಥೆಯು ವಿವಿಧ ವಿಭಾಗಗಳ ನಡುವಿನ ಜಂಟಿ ಸಂಶೋಧನೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಹಯೋಗಗಳು, ಉದ್ಯಮ ಪಾಲುದಾರಿಕೆಗಳು ಮತ್ತು ಸಮುದಾಯದ ಒಳಗೊಳ್ಳುವಿಕೆಯಿಂದಾಗಿ ಮತ್ತಷ್ಟು ಬಲಪಡಿಸಲಿದೆ. ಕರ್ನಾಟಕದಲ್ಲಿ ಮತ್ತು ಅದರ ಆಚೆಗೂ ಕೃಷಿ ಪರಿವರ್ತನೆ, ಆಹಾರ ಭದ್ರತೆ, ಪರಿಸರ ಸುಸ್ಥಿರತೆ, ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಗ್ರಾಮೀಣ ಏಳಿಗೆಗೆ ಗಮನಾರ್ಹ ಕೊಡುಗೆ ನೀಡುವ ಜಾಗತಿಕವಾಗಿ ಗುರುತಿಸಲ್ಪಟ್ಟ ಶ್ರೇಷ್ಠತೆಯ ಕೇಂದ್ರವಾಗಿ ಹೊರಹೊಮ್ಮುವುದು ನಮ್ಮ ದೃಷ್ಟಿಕೋನವಾಗಿರುತ್ತದೆ.

ನವೀಕೃತ ಸಂಕಲ್ಪ, ದೃಷ್ಟಿಕೋನ ಮತ್ತು ಶ್ರೇಷ್ಠತೆಯ ಕಡೆಗಿನ ಅಚಲ ಬದ್ಧತೆಯೊಂದಿಗೆ, ಶಿವಮೊಗ್ಗದ ಕೆ.ಶಿ.ನಾ.ಕೃ.ತೋ.ವಿ.ವಿ ಸಂಸ್ಥೆಯು ಸುಸ್ಥಿರ ಕೃಷಿ ಅಭಿವೃದ್ಧಿ, ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ, ಪರಿಸರ ಸಂರಕ್ಷಣೆ ಮತ್ತು ರೈತ ಸಮುದಾಯಗಳ ಏಳಿಗೆಗಾಗಿ ಅರ್ಥಪೂರ್ಣ ಕೊಡುಗೆಗಳನ್ನು ನೀಡುವುದನ್ನು ಮುಂದುವರಿಸುತ್ತದೆ ಎಂಬ ವಿಶ್ವಾಸ ನನಗಿದೆ. ನಾವೆಲ್ಲರೂ ಒಟ್ಟಾಗಿ ಮುಂಬರುವ ಪೀಳಿಗೆಗಾಗಿ ಚೇತರಿಕಾ, ನಾವೀನ್ಯತೆಯಿಂದ ಕೂಡಿದ ಮತ್ತು ಸುಸ್ಥಿರ ಕೃಷಿ ಭವಿಷ್ಯವನ್ನು ನಿರ್ಮಿಸಲು ಶ್ರಮಿಸೋಣ.

ಈ ವಾರ್ಷಿಕ ವರದಿಯಲ್ಲಿ ದಾಖಲಿಸಲಾದ ಸಾಧನೆಗಳು ನಮ್ಮ ಪ್ರಾಧ್ಯಾಪಕರು, ವಿಜ್ಞಾನಿಗಳು, ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ರೈತರು, ಧನಸಹಾಯ ನೀಡುವ ಸಂಸ್ಥೆಗಳು, ಸಹಯೋಗಿ ಸಂಸ್ಥೆಗಳು ಮತ್ತು ಹಿತೈಷಿಗಳ ಅಚಲ ಸಮರ್ಪಣೆ ಮತ್ತು ಸಾಮೂಹಿಕ ಪ್ರಯತ್ನಗಳಿಂದ ಮಾತ್ರ ಸಾಧ್ಯವಾಗಿದೆ. ವಿಶ್ವವಿದ್ಯಾಲಯದ ಬೆಳವಣಿಗೆ ಮತ್ತು ಯಶಸ್ಸಿಗೆ ಅಮೂಲ್ಯವಾದ ಕೊಡುಗೆ ನೀಡಿದ ಪ್ರತಿಯೊಬ್ಬರಿಗೂ ನಾನು ನನ್ನ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಾರ್ಷಿಕ ವರದಿಯನ್ನು ಅತ್ಯಂತ ನಿಖರವಾಗಿ ಸಂಕಲಿಸಿ ಪ್ರಸ್ತುತಪಡಿಸುವಲ್ಲಿ ಶ್ರಮಿಸಿದ ಸಂಪಾದಕೀಯ ಸಮಿತಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಂದನೆಗಳೊಂದಿಗೆ,



(ಎಂ ವಿ ಧನಂಜಯ)
ಕುಲಪತಿಗಳು

ದಿನಾಂಕ : 29-07-2026
ಸ್ಥಳ : ಶಿವಮೊಗ್ಗ

Executive Summary



Keladi Shivappa Nayaka University of Agricultural and Horticultural Sciences (KSNUAHS), Shivamogga continued its commitment to excellence in education, research and extension during the academic year 2025-26. The University and its four constituent colleges retained accreditation from the National Agricultural Education Accreditation Board (NAEAB) of the Indian Council of Agricultural Research (ICAR), New Delhi, reaffirming the quality of academic programmes and institutional standards.

The University comprises four constituent colleges: the College of Agriculture, Shivamogga (Navile and Iruvakki campuses), the College of Horticulture, (Mudigere and Iruvakki) the College of Horticulture, Hiriyur and the College of Forestry, (Ponnampet and Iruvakki campuses). It also includes the Diploma College of Agriculture at Brahmavar, the Main Agricultural and Horticultural Research Station at Iruvakki, four Zonal Agricultural and Horticultural Research Stations, nine Agricultural and Horticultural Research Stations, four ICAR-Krishi Vigyan Kendras (KVKs), two Extension Education Units, two Extension Units and one Farmers' Training Institute. These institutions collectively support teaching, research and extension activities aimed at addressing the needs of farmers and other stakeholders across the region.

During the year, 472 students graduated in Agriculture, Horticulture and Forestry disciplines, comprising 368 undergraduate students, 92 postgraduate students and 12 doctoral graduates. The academic excellence of the University was reflected in the achievement of 25 students who qualified for ICAR Junior Research Fellowships (JRFs) and 11 students securing ICAR Senior Research Fellowships (SRFs). Further, 70 M.Sc. and 21 Ph.D. theses were uploaded to the ICAR e-Granth portal, contributing to the dissemination of scientific knowledge. The University also continued to offer the Diploma in Agricultural Extension Services for Input Dealers (DAESI) programme with 52 candidates enrolled during the year.

The Government of Karnataka accorded permission for student admissions in two affiliated institutions, namely Alva's Institute of Agricultural Sciences and Technology offering B.Sc. (Hons.) Agriculture and B.Tech. (Food Technology) programmes and SS Institute of Agricultural and Horticultural Science, Davanagere offering UG programmes in Agricultural and Horticultural Sciences, thereby expanding opportunities for agricultural education in the State.

Students brought laurels to the University through outstanding performances in sports and extracurricular activities. At the 22nd All India Agricultural Sports' Meet held at Acharya Narendra Deva University of Agriculture and Technology, Ayodhya, Uttar Pradesh, the University contingent won eight medals, including six gold, one silver and one bronze, and secured the Men's Athletics Overall Runner-Up Championship. In the 12th KSNUAHS Inter-Collegiate Sports Tournament 2025-26, the College of Horticulture, Mudigere emerged as champions, while the College of Agriculture, Shivamogga and College of Agricultural Sciences, Iruvakki secured the runner-up position.

Research remained a key strength of the University. During the year, 387 research projects were implemented with the funding from various agencies, including the Government of India, Government of Karnataka and private organizations. Significant achievements included the release of Groundnut variety, *Sahyadri Shakthi* and Paddy variety, *Sahyadri Annapurna*, and recommendation of improved crop varieties for different agro-climatic zones and publication of 279 research papers in national and international journals.

The University developed several new technologies during the year, including 8 production, 6 plant protection, four horticultural, three farm mechanization, four crop improvement, one food science and five inland fisheries. In addition, 25 farm trials were approved to validate technologies under field conditions.

The seed and planting material production continued to play a vital role in supporting the farming community through the production and distribution of 6,730 quintals of quality seeds and 6,47,729 planting materials. The University also processed and marketed 471 kgs of honey and supplied 52,818 kgs of bio-agents and bio-fertilizers to promote environmentally sustainable agricultural practices.

To strengthen academic, research and industrial collaborations, the University entered into 13 Memoranda of Understanding (MoUs) with national and international institutions, universities, research organizations, government agencies and private industries.

The extension system of the University, comprising ICAR-KVKs, Extension Education Units, Extension Units and Farmers' Training Centre continued to play a vital role in technology transfer and capacity building. During the year, 13 On Farm Trials, 47 Frontline Demonstrations, 186 on campus training programmes, 305 off campus training programmes, and 28 vocational and skill-oriented training programmes were conducted. In addition, 3,571 soil samples, 1,124 water samples and 64 lime samples were analysed to provide scientific recommendations to the farmers and enhance agricultural productivity.

Successful organization of the Krishi-Thotagarika Mela from 7-10 November 2025 at Shivamogga under the theme "Sustainable Agriculture through Cooperative Farming", showcased advanced technologies, improved crop varieties, innovative farming practices, value-addition opportunities and emerging areas such as artificial intelligence in agriculture and demonstration of drone technologies. Similar agricultural fairs and Krishi Melas were also organized at Brahmavar, Hiriyur and Mudigere campuses, strengthening farmer-scientist interactions and technology dissemination.

The University also actively organized and participated in conferences, seminars, workshops, field days, training programmes and capacity-building initiatives. During the year, four international and national conferences, two seminars, six workshops, 35 field days, 529 training programmes and 50 rural youth training programmes were conducted, benefiting students, researchers, farmers, entrepreneurs and other stakeholders.

The faculty, scientists and students of the University received numerous prestigious awards, recognitions, fellowships and professional appointments at national and international levels, reflecting the quality and impact of their contributions to agricultural education, research and extension. Our Zonal Agricultural and Horticultural Research Station, Hiriyur has been adjudged as the Best performing AICRP-G Supporting Centre for the period of 2025-26 in the Annual Group Meeting of AICRP on Groundnut.

Overall, the achievements of KSNUAHS during 2025-26 reaffirm its commitment to excellence in agricultural education, innovative research, effective extension services and sustainable rural development, thereby contributing significantly to the agricultural and horticultural advancement of Karnataka and the well-being of the farming community.



(B Hemla Naik)
Director of Education and Chairman
Annual Report Editorial Committee

Date : 29-07-2026

Place : Shivamogga

ಕಾರ್ಯನಿರ್ವಾಹಕ ಸಾರಾಂಶ



ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು 2025–26ರ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳಲ್ಲಿ ತನ್ನ ಅತ್ಯುತ್ತಮ ಸಾಧನೆಯ ಬದ್ಧತೆಯನ್ನು ಮುಂದುವರಿಸಿದೆ. ವಿಶ್ವವಿದ್ಯಾಲಯ ಮತ್ತು ಅದರ ನಾಲ್ಕು ಸಾಂಸ್ಥಿಕ ಮಹಾವಿದ್ಯಾಲಯಗಳು, ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐಸಿಎಆರ್) ರಾಷ್ಟ್ರೀಯ ಕೃಷಿ ಶಿಕ್ಷಣ ಮಾನ್ಯತೆ ಮಂಡಳಿಯಿಂದ (ಎನ್ಎಇಎಬಿ) ತಮ್ಮ ಮಾನ್ಯತೆಯನ್ನು ಪಡೆದುಕೊಂಡಿದ್ದು, ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟ ಮತ್ತು ಸಾಂಸ್ಥಿಕ ಮಾನದಂಡಗಳನ್ನು ಮತ್ತೊಮ್ಮೆ ದೃಢೀಕರಿಸಿವೆ.

ವಿಶ್ವವಿದ್ಯಾಲಯವು ನಾಲ್ಕು ಸಾಂಸ್ಥಿಕ ಮಹಾವಿದ್ಯಾಲಯಗಳನ್ನು ಒಳಗೊಂಡಿದ್ದು, ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ (ನವಿಲೆ ಮತ್ತು ಇರುವಕ್ಕಿ ಆವರಣಗಳು), ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ ಮತ್ತು ಇರುವಕ್ಕಿ, ತೋಟಗಾರಿಕೆ ಮಹಾವಿದ್ಯಾಲಯ, ಹಿರಿಯೂರು, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ ಆವರಣಗಳು ಇವುಗಳ ಜೊತೆಗೆ, ಬ್ರಹ್ಮಾವರದಲ್ಲಿರುವ ಕೃಷಿ ಡಿಪ್ಲೊಮಾ ಕಾಲೇಜು, ಇರುವಕ್ಕಿಯಲ್ಲಿರುವ ಕೃಷಿ ಮತ್ತು ತೋಟಗಾರಿಕೆ ಮುಖ್ಯ ಸಂಶೋಧನಾ ಕೇಂದ್ರ, ನಾಲ್ಕು ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ಒಂಬತ್ತು ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ನಾಲ್ಕು ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರಗಳು, ಎರಡು ವಿಸ್ತರಣಾ ಶಿಕ್ಷಣ ಘಟಕಗಳು, ಎರಡು ವಿಸ್ತರಣಾ ಘಟಕಗಳು ಮತ್ತು ಒಂದು ರೈತ ತರಬೇತಿ ಸಂಸ್ಥೆಯನ್ನು ಇದು ಹೊಂದಿದೆ. ಈ ಸಂಸ್ಥೆಗಳು ಒಟ್ಟಾರೆಯಾಗಿ ಈ ಭಾಗದ ರೈತರ ಮತ್ತು ಇತರ ಪಾಲುದಾರರ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಬೆಂಬಲವನ್ನು ನೀಡುತ್ತಿವೆ.

ಪ್ರಸಕ್ತ ವರ್ಷದಲ್ಲಿ ಕೃಷಿ, ತೋಟಗಾರಿಕೆ ಮತ್ತು ಅರಣ್ಯಶಾಸ್ತ್ರ ವಿಭಾಗಗಳಲ್ಲಿ ಒಟ್ಟು 472 ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ಇದರಲ್ಲಿ 368 ಪದವಿ (ಸ್ನಾತಕ) ವಿದ್ಯಾರ್ಥಿಗಳು, 92 ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು 12 ಪಿಎಚ್.ಡಿ (ಡಾಕ್ಟೋರಲ್) ಪದವೀಧರರು ಸೇರಿದ್ದಾರೆ. ವಿಶ್ವವಿದ್ಯಾಲಯದ ಶೈಕ್ಷಣಿಕ ಶ್ರೇಷ್ಠತೆಯ ಪ್ರತಿಫಲವಾಗಿ 25 ವಿದ್ಯಾರ್ಥಿಗಳ ಐಸಿಎಆರ್–ಕಿರಿಯ ಸಂಶೋಧನಾ ಫೆಲೋಶಿಪ್‌ಗೆ (ಜೆಆರ್ಎಫ್) ಮತ್ತು 11 ವಿದ್ಯಾರ್ಥಿಗಳ ಐಸಿಎಆರ್– ಹಿರಿಯ ಸಂಶೋಧನಾ ಫೆಲೋಶಿಪ್ (ಎಸ್ಆರ್ಎಫ್) ಅರ್ಹತೆ ಪಡೆದಿದ್ದಾರೆ. ಇದಲ್ಲದೆ, ವೈಜ್ಞಾನಿಕ ಜ್ಞಾನದ ಪ್ರಸರಣಕ್ಕೆ ಕೊಡುಗೆಯಾಗಿ 70 ಎಂ.ಎಸ್ಸಿ. ಮತ್ತು 21 ಪಿಎಚ್.ಡಿ. ಮಹಾಪ್ರಬಂಧಗಳನ್ನು ಐಸಿಎಆರ್ ನ 'ಇ–ಗ್ರಂಥ್' ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗಿದೆ. ವಿಶ್ವವಿದ್ಯಾಲಯವು ಕೃಷಿ ಪರಿಕರಗಳ ಡೀಲರ್‌ಗಳಿಗಾಗಿ ಕೃಷಿ ವಿಸ್ತರಣಾ ಸೇವೆಗಳ ಡಿಪ್ಲೊಮಾ ಕಾರ್ಯಕ್ರಮವನ್ನು ಮುಂದುವರಿಸಿದ್ದು, ಈ ವರ್ಷ 52 ಅಭ್ಯರ್ಥಿಗಳು ದಾಖಲಾಗಿದ್ದಾರೆ.

ಕರ್ನಾಟಕ ಸರ್ಕಾರವು ಎರಡು ಅಂಗೀಕೃತ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡಿರುತ್ತದೆ. ಅವುಗಳೆಂದರೆ: ಬಿ.ಎಸ್ಸಿ. (ಆನರ್ಸ್) ಕೃಷಿ ಮತ್ತು ಬಿ.ಟೆಕ್. (ಆಹಾರ ತಂತ್ರಜ್ಞಾನ) ಕಾರ್ಯಕ್ರಮಗಳನ್ನು ಮೂಡುಬಿದಿರೆಯ 'ಆಳ್ವಾಸ್ ಕೃಷಿ ವಿಜ್ಞಾನಗಳ ಮತ್ತು ತಂತ್ರಜ್ಞಾನ ಸಂಸ್ಥೆಯು' ನೀಡುತ್ತಿದೆ. ಕೃಷಿ ಹಾಗೂ ತೋಟಗಾರಿಕೆ ವಿಜ್ಞಾನಗಳಲ್ಲಿ ಪದವಿ ಕಾರ್ಯಕ್ರಮಗಳನ್ನು ದಾವಣಗೆರೆಯ 'ಎಸ್.ಎಸ್. ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ಸಂಸ್ಥೆಯು' ನೀಡುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಕೃಷಿ ಶಿಕ್ಷಣದ ಅವಕಾಶಗಳು ಮತ್ತಷ್ಟು ವಿಸ್ತರಣೆಗೊಂಡಿವೆ.

ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಉತ್ತರ ಪ್ರದೇಶದ ಅಯೋಧ್ಯೆಯ ಆಚಾರ್ಯ ನರೇಂದ್ರ ದೇವ್ ಕೃಷಿ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ 22ನೇ ಅಖಿಲ ಭಾರತ ಕೃಷಿ ಕ್ರೀಡಾಕೂಟದಲ್ಲಿ, ವಿಶ್ವವಿದ್ಯಾಲಯದ ತಂಡವು 6 ಚಿನ್ನ, 1 ಬೆಳ್ಳಿ ಮತ್ತು 1 ಕಂಚು ಸೇರಿದಂತೆ ಒಟ್ಟು ಎಂಟು ಪದಕಗಳನ್ನು ಗೆದ್ದು, ಪುರುಷರ ಅಥ್ಲೆಟಿಕ್ಸ್‌ನಲ್ಲಿ ಒಟ್ಟಾರೆ ರನ್ನರ್–ಅಪ್ ಚಾಂಪಿಯನ್‌ಶಿಪ್ ಮುಡಿಗೇರಿಸಿಕೊಂಡಿದೆ. 12ನೇ ಕೆ.ಶಿ.ನಾ.ಕೃ.ತೋ.ವಿ.ವಿ. ಅಂತರ–ಮಹಾವಿದ್ಯಾಲಯ ಕ್ರೀಡಾಕೂಟ 2025–26 ರಲ್ಲಿ ಮೂಡಿಗೆರೆಯ ತೋಟಗಾರಿಕೆ ಮಹಾವಿದ್ಯಾಲಯ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಶಿವಮೊಗ್ಗದ ಕೃಷಿ ಮಹಾವಿದ್ಯಾಲಯ ಮತ್ತು ಇರುವಕ್ಕಿಯ ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ ರನ್ನರ್–ಅಪ್ ಸ್ಥಾನವನ್ನು ಹಂಚಿಕೊಂಡಿವೆ.

ಸಂಶೋಧನೆಯು ವಿಶ್ವವಿದ್ಯಾಲಯದ ಪ್ರಮುಖ ಶಕ್ತಿಯಾಗಿ ಮುಂದುವರಿದಿದೆ. ಈ ವರ್ಷದಲ್ಲಿ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಸೇರಿದಂತೆ ವಿವಿಧ ಸಂಸ್ಥೆಗಳ ಧನಸಹಾಯದೊಂದಿಗೆ 387 ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಮುಖ ಸಾಧನೆಗಳಲ್ಲಿ ಶೇಂಗಾ ತಳಿ 'ಸಹ್ಯಾದ್ರಿ ಶಕ್ತಿ' ಮತ್ತು ಭತ್ತದ ತಳಿ 'ಸಹ್ಯಾದ್ರಿ ಅನ್ನಪೂರ್ಣ' ಬಿಡುಗಡೆ ಮಾಡಲಾಗಿದೆ. ವಿವಿಧ ಕೃಷಿ-ಹವಾಮಾನ ವಲಯಗಳಿಗೆ ಸುಧಾರಿತ ಬೆಳೆ ತಳಿಗಳನ್ನು ಶಿಫಾರಸು ಮಾಡಲಾಗಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ 325 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲಾಗಿದೆ.

ವಿಶ್ವವಿದ್ಯಾಲಯವು ಪ್ರಸಕ್ತ ವರ್ಷದಲ್ಲಿ ಹಲವಾರು ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿರುತ್ತದೆ. ಇವುಗಳಲ್ಲಿ 08 ಉತ್ಪಾದನಾ ತಂತ್ರಜ್ಞಾನಗಳು, 06 ಸಸ್ಯ ಸಂರಕ್ಷಣಾ ತಂತ್ರಜ್ಞಾನಗಳು, 4 ತೋಟಗಾರಿಕಾ ತಂತ್ರಜ್ಞಾನಗಳು, 3 ಕೃಷಿ ಯಾಂತ್ರೀಕರಣ ತಂತ್ರಜ್ಞಾನಗಳು, 1 ಆಹಾರ ವಿಜ್ಞಾನ ತಂತ್ರಜ್ಞಾನ, 1 ಒಳನಾಡು ಮೀನುಗಾರಿಕೆ ತಂತ್ರಜ್ಞಾನಗಳು ಸೇರಿವೆ. ಇದಲ್ಲದೆ, ತಂತ್ರಜ್ಞಾನಗಳನ್ನು ಕ್ಷೇತ್ರ ಮಟ್ಟದಲ್ಲಿ ಮೌಲ್ಯೀಕರಿಸಲು 23 ಕ್ಷೇತ್ರ ಪ್ರಯೋಗಗಳಿಗೆ ಅನುಮೋದನೆ ನೀಡಲಾಗಿದೆ.

ರೈತ ಸಮುದಾಯಕ್ಕೆ ಬೆಂಬಲ ನೀಡುವಲ್ಲಿ ಬಿತ್ತನೆ ಬೀಜ ಮತ್ತು ಬಿತ್ತನೆ ಪರಿಕರ ಉತ್ಪಾದನೆಯು ಪ್ರಮುಖ ಪಾತ್ರ ವಹಿಸಿದ್ದು, 6,730 ಕ್ವಿಂಟಾಲ್ ಗುಣಮಟ್ಟದ ಬಿತ್ತನೆ ಬೀಜಗಳು ಮತ್ತು 6,47,729 ಬಿತ್ತನೆ ಸಾಮಗ್ರಿಗಳನ್ನು ಉತ್ಪಾದಿಸಿ ವಿತರಿಸಲಾಗಿದೆ. ಪರಿಸರ ಸ್ನೇಹಿ, ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು ವಿಶ್ವವಿದ್ಯಾಲಯವು 471 ಕೆಜಿ ಜೇನುತುಪ್ಪವನ್ನು ಸಂಸ್ಕರಿಸಿ ಮಾರಾಟ ಮಾಡಿದ್ದು ಹಾಗೂ 52,818 ಕೆಜಿ ಜೈವಿಕ ಏಜೆಂಟ್‌ಗಳು ಮತ್ತು ಜೈವಿಕ ಗೊಬ್ಬರಗಳನ್ನು ಪೂರೈಸಿರುತ್ತದೆ.

ಶೈಕ್ಷಣಿಕ, ಸಂಶೋಧನಾ ಮತ್ತು ಕೈಗಾರಿಕಾ ಸಹಯೋಗವನ್ನು ಬಲಪಡಿಸಲು, ವಿಶ್ವವಿದ್ಯಾಲಯವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಕೈಗಾರಿಕೆಗಳೊಂದಿಗೆ 13 ಪರಸ್ಪರ ಒಪ್ಪಂದಗಳಿಗೆ ಸಹಿ ಹಾಕಿದೆ.

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಘಟಕಗಳು, ವಿಸ್ತರಣಾ ಘಟಕಗಳು ಮತ್ತು ರೈತ ತರಬೇತಿ ಕೇಂದ್ರಗಳನ್ನು ಒಳಗೊಂಡ ವಿಶ್ವವಿದ್ಯಾಲಯದ ವಿಸ್ತರಣಾ ವ್ಯವಸ್ಥೆಯು ತಂತ್ರಜ್ಞಾನ ವರ್ಗಾವಣೆ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ವರ್ಷದಲ್ಲಿ 13 ಕ್ಷೇತ್ರ ಪ್ರಯೋಗಗಳು, 47 ಮುಂಚೂಣಿ ಪ್ರಾತ್ಯಕ್ಷಿಕೆಗಳು, 186 ಒಳ ಆವರಣ ತರಬೇತಿ ಕಾರ್ಯಕ್ರಮಗಳು, 305 ಹೊರ ಆವರಣ ತರಬೇತಿ ಮತ್ತು 28 ವೃತ್ತಿಪರ ಹಾಗೂ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜೊತೆಗೆ, ರೈತರಿಗೆ ವೈಜ್ಞಾನಿಕ ಶಿಫಾರಸುಗಳನ್ನು ಮಾಡಲು ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು 3,571 ಮಣ್ಣಿನ ಮಾದರಿಗಳು, 1,124 ನೀರಿನ ಮಾದರಿಗಳು ಮತ್ತು 64 ಸುಣ್ಣದ ಮಾದರಿಗಳನ್ನು ವಿಶ್ಲೇಷಿಸಲಾಗಿದೆ.

ಶಿವಮೊಗ್ಗದಲ್ಲಿ 2025 ನವೆಂಬರ್ 7-10 ರವರೆಗೆ "ಸಹಕಾರ ಕೃಷಿಯಿಂದ ಸುಸ್ಥಿರ ಕೃಷಿ" ಎಂಬ ವಿಷಯದ ಅಡಿಯಲ್ಲಿ ಆಯೋಜಿಸಲಾದ ಕೃಷಿ-ತೋಟಗಾರಿಕಾ ಮೇಳವು ಯಶಸ್ವಿಯಾಗಿ ನಡೆಯಿತು. ಇದು ಸುಧಾರಿತ ತಂತ್ರಜ್ಞಾನಗಳು, ಸುಧಾರಿತ ಬೆಳೆ ತಳಿಗಳು, ನವೀನ ಕೃಷಿ ಪದ್ಧತಿಗಳು, ಮೌಲ್ಯವರ್ಧನೆ ಅವಕಾಶಗಳು ಹಾಗೂ ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ಮತ್ತು ಡ್ರೋನ್ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಯಂತಹ ಉದಯೋನ್ಮುಖ ಕ್ಷೇತ್ರಗಳನ್ನು ಪ್ರದರ್ಶಿಸಲಾಯಿತು. ಇಂತಹದೇ ಕೃಷಿ ಮೇಳಗಳನ್ನು ಬ್ರಹ್ಮಾವರ, ಹಿರಿಯೂರು ಮತ್ತು ಮೂಡಿಗೆರೆ ಆವರಣಗಳಲ್ಲೂ ಏರ್ಪಡಿಸಲಾಗಿತ್ತು. ಇದರಿಂದ ರೈತರು ಮತ್ತು ವಿಜ್ಞಾನಿಗಳ ನಡುವಿನ ಸಂವಾದ ಹಾಗೂ ತಂತ್ರಜ್ಞಾನ ಪ್ರಸರಣವನ್ನು ಬಲಪಡಿಸಲಾಯಿತು.

ವಿಶ್ವವಿದ್ಯಾಲಯವು ಹಲವಾರು ಸಮ್ಮೇಳನಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು, ಕ್ಷೇತ್ರೋತ್ಸವಗಳು ಮತ್ತು ಸಾಮರ್ಥ್ಯ ವೃದ್ಧಿ ಉಪಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಏರ್ಪಡಿಸಿರುತ್ತದೆ. ಈ ವರ್ಷದಲ್ಲಿ ನಾಲ್ಕು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮ್ಮೇಳನಗಳು, ಎರಡು ವಿಚಾರಗೋಷ್ಠಿಗಳು, ಆರು ಕಾರ್ಯಾಗಾರಗಳು, 35 ಕ್ಷೇತ್ರೋತ್ಸವಗಳು, 529 ತರಬೇತಿ ಕಾರ್ಯಕ್ರಮಗಳು ಮತ್ತು 50 ಗ್ರಾಮೀಣ ಯುವಕರ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು, ಸಂಶೋಧಕರು, ರೈತರು ಹಾಗೂ ಉದ್ಯಮಿಗಳು ಪಡೆದುಕೊಂಡಿದ್ದಾರೆ.

ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು, ಮನ್ನಣೆಗಳು, ಫೆಲೋಶಿಪ್‌ಗಳು ಮತ್ತು ವೃತ್ತಿಪರ ನೇಮಕಾತಿಗಳನ್ನು ಪಡೆದಿದ್ದಾರೆ. ಇದು ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗೆ ಅವರು ನೀಡಿದ ಕೊಡುಗೆಯ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. ನಮ್ಮ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಹಿರಿಯೂರಿನ ಅಖಿಲ ಭಾರತ ಸುಸಂಘಟಿತ ಸಂಶೋಧನಾ ಯೋಜನೆ–ನೆಲಗಡಲೆಯನ್ನು 2025–26ನೇ ಅವಧಿಯ ಉತ್ತಮ ಕಾರ್ಯನಿರ್ವಹಿಸುತ್ತಿರುವ ಅತಿಪ್ರತಿಷ್ಠಿತ ಬೆಂಬಲ ಕೇಂದ್ರ ಎಂದು ಪ್ರಶಂಸಿಸಲಾಗಿದೆ.

ಒಟ್ಟಾರೆಯಾಗಿ, 2025–26ರ ಸಾಲಿನಲ್ಲಿ ಕೆ.ಶಿ.ನಾ.ಕೃ.ತೋ.ವಿ.ವಿ.,ಯ ಸಾಧನೆಗಳು ಕೃಷಿ ಶಿಕ್ಷಣದಲ್ಲಿನ ಶ್ರೇಷ್ಠತೆ, ನವೀನ ಸಂಶೋಧನೆ, ಪರಿಣಾಮಕಾರಿ ವಿಸ್ತರಣಾ ಸೇವೆಗಳು ಮತ್ತು ಸುಸ್ಥಿರ ಗ್ರಾಮೀಣ ಅಭಿವೃದ್ಧಿಗೆ ಅದರ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ. ಆ ಮೂಲಕ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಪ್ರಗತಿಗೆ ಹಾಗೂ ರೈತ ಸಮುದಾಯದ ಅಭಿವೃದ್ಧಿಗೆ ವಿಶ್ವವಿದ್ಯಾಲಯವು ಗಣನೀಯ ಕೊಡುಗೆ ನೀಡುತ್ತಿದೆ.

ದಿನಾಂಕ : 29–07–2026
ಸ್ಥಳ : ಶಿವಮೊಗ್ಗ

(ಬಿ ಹೇಮ್ಲಾ ನಾಯಕ್)
ಶಿಕ್ಷಣ ನಿರ್ದೇಶಕರು ಮತ್ತು ಅಧ್ಯಕ್ಷರು
ವಾರ್ಷಿಕ ವರದಿ ಸಂಪಾದಕೀಯ ಸಮಿತಿ

CONTENT : ಪರಿವಿಡಿ

Sl. No. ಕ್ರ. ಸಂ.	Particulars ವಿವರಗಳು	Page No. ಪುಟ ಸಂಖ್ಯೆ
1.	**Introduction** **ಪೀಠಿಕೆ**	
	About the University ವಿಶ್ವವಿದ್ಯಾಲಯದ ಪರಿಚಯ	1-4
	Highlights of the Year ವರ್ಷದ ಮುಖ್ಯಾಂಶಗಳು	5-26
	Constituent Units of University ವಿಶ್ವವಿದ್ಯಾಲಯದ ಸಾಂಸ್ಥಿಕ ಘಟಕಗಳು	27-41
	Meetings of the University Authorities ವಿಶ್ವವಿದ್ಯಾಲಯದ ಪ್ರಾಧಿಕಾರಿಗಳ ಸಭೆಗಳು	41
	Important Decisions of Board of Management Meetings ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು	41-42
	Memorandum of Understandings ತಿಳುವಳಿಕೆಯ ಒಡಂಬಡಿಕೆಗಳು	43
	Important Activities of the Vice-Chancellor ಕುಲಪತಿಯವರ ಪ್ರಮುಖ ಕಾರ್ಯಚಟುವಟಿಕೆಗಳು	44-50
	Activities of Priority Setting, Monitoring and Evaluation Cell ಆದ್ಯತೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಘಟಕದ ಚಟುವಟಿಕೆಗಳು	50
2.	**Education** **ಶಿಕ್ಷಣ**	
	Colleges Under the Purview of Directorate of Education ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಮಹಾವಿದ್ಯಾಲಯಗಳು	51-53
	Educational Programmes Offered in the University ವಿಶ್ವವಿದ್ಯಾಲಯದಲ್ಲಿ ನಡೆಸಲಾಗುವ ಶೈಕ್ಷಣಿಕ ಕಾರ್ಯಕ್ರಮಗಳು	53-55
	Students Status in University ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಿವರ	55-61
	Important Activities at Different Colleges ವಿವಿಧ ಮಹಾವಿದ್ಯಾಲಯಗಳಲ್ಲಿನ ಪ್ರಮುಖ ಚಟುವಟಿಕೆಗಳು	62-78
	List of Postgraduate Theses ಸ್ನಾತಕೋತ್ತರ ಸಂಶೋಧನಾ ಪ್ರಬಂಧಗಳು	79-86
	University Examination Centre ವಿಶ್ವವಿದ್ಯಾಲಯ ಪರೀಕ್ಷಾ ಕೇಂದ್ರ	87
	University Library ವಿಶ್ವವಿದ್ಯಾಲಯ ಗ್ರಂಥಾಲಯ	87
	University Communication Centre ವಿಶ್ವವಿದ್ಯಾಲಯ ಸಂವಹನ ಕೇಂದ್ರ	88
	Student Amenities and Activities ವಿದ್ಯಾರ್ಥಿ ಸೌಲಭ್ಯಗಳು ಮತ್ತು ಚಟುವಟಿಕೆಗಳು	88-89
	Students Achievements ವಿದ್ಯಾರ್ಥಿಗಳ ಸಾಧನೆಗಳು	90-98
	Scheduled Caste and Scheduled Tribe Cell ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ	98

Sl. No. ಕ್ರ. ಸಂ.	Particulars ವಿವರಗಳು	Page No. ಪುಟ ಸಂಖ್ಯೆ
3.	**Research** **ಸಂಶೋಧನೆ**	
	Directorate of Research ಸಂಶೋಧನಾ ನಿರ್ದೇಶನಾಲಯ	99-100
	Varieties Released ಬಿಡುಗಡೆಯಾದ ತಳಿಗಳು	101
	Varieties Endorsed ಅನುಮೋದಿಸಲಾದ ತಳಿಗಳು	102
	Recommendation for Package of Practices ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಗೆ ಶಿಫಾರಸ್ಸು	103-112
	Developed Machineries ಅಭಿವೃದ್ಧಿಪಡಿಸಲಾದ ಯಂತ್ರಗಳು	112-114
	New Farm Trials ನೂತನ ಕ್ಷೇತ್ರ ಪ್ರಯೋಗಗಳು	114-117
	Other Activities ಇತರೆ ಚಟುವಟಿಕೆಗಳು	117-118
4.	**Extension** **ವಿಸ್ತರಣೆ**	
	Directorate of Extension ವಿಸ್ತರಣಾ ನಿರ್ದೇಶನಾಲಯ	119-120
	On-Farm Trials ಕೃಷಿಕ್ಷೇತ್ರದಲ್ಲಿ ನಡೆಸಲಾದ ಪರೀಕ್ಷೆಗಳು	120-124
	Front Line Demonstrations ಮುಂಚೂಣಿ ಪ್ರಾತ್ಯಕ್ಷಿಕೆಗಳು	124-134
	Demonstrations ಪ್ರಾತ್ಯಕ್ಷಿಕೆಗಳು	134-135
	Training Programmes Organized for Farmers / Departmental Staff / Others ರೈತರಿಗೆ / ಇಲಾಖಾ ಸಿಬ್ಬಂದಿಗಳಿಗೆ / ಇತರರಿಗೆ ಏರ್ಪಡಿಸಿದ ತರಬೇತಿ ಕಾರ್ಯಕ್ರಮಗಳು	135
	Soil, Water and Lime samples analyzed ಮಣ್ಣು, ನೀರು ಮತ್ತು ಸುಣ್ಣದ ಮಾದರಿಗಳ ವಿಶ್ಲೇಷಣೆ	135
	Agro Advisory Services ಕೃಷಿ ಸಲಹಾ ಸೇವೆಗಳು	135
	Farm productions from different ICAR-KVKs ವಿವಿಧ ಭಾ.ಕೃ.ಅ.ಪ.–ಕೆ.ವಿ.ಕೆ.ಗಳಿಂದ ಕ್ಷೇತ್ರ ಉತ್ಪಾದನೆ	135-136
	Other Extension Activities ಇತರೆ ವಿಸ್ತರಣಾ ಚಟುವಟಿಕೆಗಳು	136-144
5.	**Honours and Awards** **ಗೌರವಗಳು ಮತ್ತು ಪ್ರಶಸ್ತಿಗಳು**	145-151
6.	**Visit of Distinguished Guests** **ಭೇಟಿ ನೀಡಿದ ಗಣ್ಯರು**	152-155

Sl. No. ಕ್ರ. ಸಂ.	Particulars ವಿವರಗಳು	Page No. ಪುಟ ಸಂಖ್ಯೆ
7.	**Human Resource** **ಮಾನವ ಸಂಪನ್ಮೂಲ**	
	University Staff Position ವಿಶ್ವವಿದ್ಯಾಲಯದ ನೌಕರರ ವಿವರ	156-157
	Programmes Organized; Conference/Seminar/Workshop/ Field Day/Training/Training programme for the Rural youth/Brain Storming Session/Short and Refresher Course/Sponsored training/ Vocational trainings **ಏರ್ಪಡಿಸಿದ ಕಾರ್ಯಕ್ರಮಗಳು;** ಸಮ್ಮೇಳನ/ವಿಚಾರಸಂಕಿರಣ/ಕಾರ್ಯಾಗಾರ/ಕ್ಷೇತ್ರೋತ್ಸವ/ತರಬೇತಿ/ಗ್ರಾಮೀಣ ಯುವಕರಿಗೆ ತರಬೇತಿ / ಮುಕ್ತ ಸಂವಾದ ಸಮಾವೇಶ/ಕಿರು ಮತ್ತು ಪುನರ್ ಮನನ ಕೋರ್ಸ್/ಪ್ರಾಯೋಜಿತ/ ವೃತ್ತಿಪರ ತರಬೇತಿಗಳು	158-202
	Programmes Participated as a Trainee; Conference/Seminar/Workshop/Training/Short and Refresher Course/ winter School/ Summer Schools **ಶಿಬಿರಾರ್ಥಿಯಾಗಿ ಭಾಗವಹಿಸಿದ ಕಾರ್ಯಕ್ರಮಗಳು;** ಸಮ್ಮೇಳನ/ವಿಚಾರಸಂಕಿರಣ/ಕಾರ್ಯಾಗಾರ/ತರಬೇತಿ/ ಅಲ್ಪಾವಧಿ ಮತ್ತು ಪುನರ್ ಮನನ ಕೋರ್ಸ್/ ಚಳಿಗಾಲದ/ ಬೇಸಿಗೆ ಶಾಲೆಗಳು	203-212
8.	**Campus Development** **ಆವರಣ ಅಭಿವೃದ್ಧಿ**	
	Construction and Developmental Activities ನಿರ್ಮಾಣ ಮತ್ತು ಅಭಿವೃದ್ಧಿ ಚಟುವಟಿಕೆಗಳು	213-214
9.	**Finance** **ಹಣಕಾಸು**	215
10.	**Publications** **ಪ್ರಕಟಣೆಗಳು**	
	Research Publications ಸಂಶೋಧನಾ ಪ್ರಕಟಣೆಗಳು	216-236
	Research Papers Presented in Conferences / Seminars / Symposia ಸಮ್ಮೇಳನಗಳು /ವಿಚಾರಣಸಂಕಿರಣಗಳು/ವಿಚಾರಗೋಷ್ಠಿಗಳಲ್ಲಿ ಪ್ರಸ್ತುತಪಡಿಸಿದ ಸಂಶೋಧನಾ ಪ್ರಬಂಧಗಳು	236-247
	Popular Articles ಜನಪ್ರಿಯ ಲೇಖನಗಳು	247-252
	Abstracts ಸಾರಾಂಶಗಳು	252-256
	Leaflets / Folders / Booklets ಹಸ್ತಪ್ರತಿಗಳು / ಮಡಿಕೆಪತ್ರಿಕೆಗಳು / ಕಿರುಹೊತ್ತಿಗೆಗಳು	256-257
	Technical Articles / Bulletins / Manuals ತಾಂತ್ರಿಕ ಲೇಖನಗಳು / ಬುಲೆಟಿನ್ ಗಳು/ ಕೈಪಿಡಿಗಳು	257-258
	Books / Chapters in Books ಪುಸ್ತಕಗಳು / ಪುಸ್ತಕಗಳಲ್ಲಿನ ಅಧ್ಯಾಯಗಳು	258-259
11.	**Our Proud Farmers** **ನಮ್ಮ ಹೆಮ್ಮೆಯ ರೈತರು**	260-263

1. Introduction : ಪೀಠಿಕೆ

About the University

University of Agricultural and Horticultural Sciences (UAHS) was carved out of University of Agricultural Sciences (UAS), Bengaluru and University of Horticultural Sciences (UHS), Bagalkote. From UAS Bengaluru, College of Agriculture Shivamogga and College of Forestry, Ponnampet (Educational institutions), all the Research Stations and ICAR- KVKs of seven districts *viz.,* Davanagere, Chitradurga, Shivamogga, Chikkamagaluru, Kodagu, Dakshina Kannada and Udupi and from UHS Bagalakote, Colleges of Horticulture, Mudigere and Hiriyur (Educational institutions) were separated and brought under the Management of UAHS, Shivamogga.

UAHS started operational from 21-09-2012 through a special ordinance passed by Govt. of Karnataka (Special Gazette Notification of Karnataka Act No. 38 of 2012, Part IV-J (No. 656). Intriguingly, UAHS started functioning independently from 1st April, 2013.

In 26-07-2021, the name of the University was changed from University of Agricultural and Horticultural Sciences (UAHS) to Keladi Shivappa Nayaka University of Agricultural and Horticultural Sciences (KSNUAHS) through another Ordinance passed by Government of Karnataka considering the substantial reforms in the field of Agriculture by Shistu Shivappa Nayaka; a prominent ruler in the Keladi Dynasty by Government of Karnataka.

KSNUAHS is the First Integrated University in the State of Karnataka which has Agriculture, Horticulture and Forestry Sciences under its purview. It has an operational jurisdiction in seven districts *viz.,* Shivamogga, Chikkamagaluru, Udupi, Dakshina Kannada, Kodagu, Davanagere and Chitradurga.

ವಿಶ್ವವಿದ್ಯಾಲಯದ ಬಗ್ಗೆ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಮತ್ತು ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಂದ ಪ್ರತ್ಯೇಕಗೊಂಡು ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ಕೃ.ತೋ.ವಿ.ವಿ.)ವಾಗಿ ರೂಪುಗೊಂಡಿರುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ (ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ (ಶಿಕ್ಷಣ ಸಂಸ್ಥೆಗಳನ್ನು) ಹಾಗೂ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದಿಂದ ಮೂಡಿಗೆರೆ ತೋಟಗಾರಿಕೆ ಮಹಾವಿದ್ಯಾಲಯ ಮತ್ತು ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯ (ಶೈಕ್ಷಣಿಕ ಸಂಸ್ಥೆಗಳು)ಗಳನ್ನು ಪ್ರತ್ಯೇಕಿಸಿ ಇದರೊಂದಿಗೆ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಈ ಏಳು ಜಿಲ್ಲೆಗಳಲ್ಲಿನ ಎಲ್ಲಾ ಸಂಶೋಧನಾ ಕೇಂದ್ರಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳು ಒಳಗೊಂಡಂತೆ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತದ ವ್ಯಾಪ್ತಿಗೆ ತರಲಾಗಿದೆ.

ಕೃ.ತೋ.ವಿ.ವಿವು 21–09–2012ರಿಂದ ಕರ್ನಾಟಕ ಸರ್ಕಾರವು ವಿಶೇಷ ಶಾಸನದ ಮೂಲಕ (2012ರ ಕರ್ನಾಟಕ ಕಾಯಿದೆ ಸಂಖ್ಯೆ 38ರ ವಿಶೇಷ ಗೆಜೆಟ್ ಅಧಿಸೂಚನೆ, ಭಾಗ4–ಜೆ(ಸಂ.656) ವಿಶ್ವವಿದ್ಯಾಲಯ ಸ್ಥಾಪನೆಗೆ ಅನುವು ಮಾಡಿಕೊಟ್ಟಿರುತ್ತದೆ. ಇದರನ್ವಯ ಕೃ.ತೋ.ವಿ.ವಿ. ಯು 1ನೇ ಏಪ್ರಿಲ್, 2013 ರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭಿಸಿತು.

ಕರ್ನಾಟಕ ಸರ್ಕಾರವು ದಿನಾಂಕ 26–07–2021 ರಲ್ಲಿ, ವಿಶ್ವವಿದ್ಯಾಲಯದ ಹೆಸರನ್ನು ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ಕೆ.ಶಿ.ನಾ.ಕೃ.ತೋ.ವಿ.ವಿ.) ಎಂದು ಮರುನಾಮಕರಣ ಮಾಡಿ ಆದೇಶ ಹೊರಡಿಸಿರುತ್ತದೆ. ಕೆಳದಿ ರಾಜವಂಶದ ಪ್ರಮುಖ ಆಡಳಿತಗಾರ ಶಿಸ್ತಿನ ಶಿವಪ್ಪನಾಯಕರೆಂದೇ ಹೆಸರಾಗಿರುವ ಇವರು ಕೃಷಿ ಕ್ಷೇತ್ರದಲ್ಲಿ ಗಣನೀಯ ಸುಧಾರಣೆಗಳನ್ನು ತಂದಿರುವುದನ್ನು ಪರಿಗಣಿಸಿ; ಕರ್ನಾಟಕ ಸರ್ಕಾರ ಈ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತದೆ.

ಕೆ.ಶಿ.ನಾ.ಕೃ.ತೋ.ವಿ.ವಿ.ಯು ಕೃಷಿ, ತೋಟಗಾರಿಕೆ ಮತ್ತು ಅರಣ್ಯ ವಿಜ್ಞಾನಗಳನ್ನು ಒಳಗೊಂಡ ರಾಜ್ಯದ ಮೊಟ್ಟ ಮೊದಲ ಏಕೈಕ ಸಮಗ್ರ ವಿಶ್ವವಿದ್ಯಾಲಯವಾಗಿದೆ. ನಮ್ಮ ವಿಶ್ವವಿದ್ಯಾಲಯವು ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣಕನ್ನಡ, ಕೊಡಗು, ದಾವಣಗೆರೆ ಮತ್ತು ಚಿತ್ರದುರ್ಗ ಈ ಏಳು ಜಿಲ್ಲೆಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತದೆ.

The University has a vision to transform itself into the “Light house of Knowledge”. The head quarter of the KSNUAHS is located at Iruvakki, a green campus located in the midst of United Nation’s-World Heritage Centre, truly a hot spot of Bio-diversity at Sagara Taluk of Shivamogga District. The New campus is on the road between Shivamogga–Baindur National Highway (NH-776C) and Bengaluru- Honnavara (NH-69) and 50 km far from Navile Campus It is also well connected by Train, nearest Railway Station is Anandapura (4 KM) and nearest Airports are at Shivamogga (60 KM), Mangaluru (225 KM), Hubli (265 KM), and Bengaluru (315 KM).

ವಿಶ್ವವಿದ್ಯಾಲಯವು ತನ್ನನ್ನು ತಾನು “ಜ್ಞಾನದ ಬೆಳಕಾಗಿ” ಪರಿವರ್ತಿಸುವ ದೃಷ್ಟಿಯನ್ನು ಹೊಂದಿದೆ. ಇದರ ಪ್ರಧಾನ ಕಛೇರಿಯು ಇರುವಕ್ಕಿಯಲ್ಲಿದೆ. ಇದು ವಿಶ್ವಸಂಸ್ಥೆಯ ವಿಶ್ವ ಪರಂಪರೆಯ ಕೇಂದ್ರದ ಮಧ್ಯದಲ್ಲಿರುವ ಹಸಿರು ಆವರಣವಾಗಿದ್ದು, ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿರುವ ಜೈವಿಕ ವೈವಿಧ್ಯತೆಯ ಹಾಟ್ ಸ್ಪಾಟ್ ಕೇಂದ್ರವಾಗಿದೆ. ನೂತನ ಕಛೇರಿ ಶಿವಮೊಗ್ಗ– ಬೈಂದೂರು ರಾಷ್ಟ್ರೀಯ ಹೆದ್ದಾರಿ (ಎನ್. ಹೆಚ್–776ಸಿ) ನಡುವಿನ ಮತ್ತು ಬೆಂಗಳೂರು–ಹೊನ್ನಾವರ–ಎನ್. ಹೆಚ್–69 ಹೆದ್ದಾರಿಯ ನಡುವೆ ಇದೆ. ಶಿವಮೊಗ್ಗದ ನವಿಲೆಯ ಆವರಣದಿಂದ 50ಕಿ.ಮೀ. ದೂರದಲ್ಲಿದ್ದು, ಎನ್.ಹೆಚ್–13 ಮತ್ತು 206 ಮೂಲಕ ಬೆಂಗಳೂರಿಗೆ ಸಂಪರ್ಕ ಮಾರ್ಗವನ್ನು ಹೊಂದಿದೆ. ಅಲ್ಲದೆ ಆನಂದಪುರ ರೈಲಿನ ಸಾರಿಗೆ ಸಂಪರ್ಕ ಸಹ ಹೊಂದಿದೆ (4 ಕಿ.ಮೀ) ಮತ್ತು ಮುಖ್ಯ ಆವರಣದ ಸಮೀಪಕ್ಕೆ ವಿಮಾನ ನಿಲ್ದಾಣಗಳಾದ ಶಿವಮೊಗ್ಗ (60 ಕಿ.ಮೀ.) ಮಂಗಳೂರು (225 ಕಿ.ಮೀ.), ಹುಬ್ಬಳ್ಳಿ (265 ಕಿ.ಮೀ.) ಮತ್ತು ಬೆಂಗಳೂರುಗಳಲ್ಲಿ (315 ಕಿ.ಮೀ.) ಸೌಲಭ್ಯವನ್ನು ಹೊಂದಿರುತ್ತದೆ.

Note: From the Academic year 2025-26 on 26-06-2025, College of Forestry, Ponnampet, Agricultural and Horticultural Research Station, Ponnampet and Madikeri have been transferred to UAS, Mandya.

ಸೂಚನೆ: 2025–26 ಶೈಕ್ಷಣಿಕ ವರ್ಷದಿಂದ 26–06–2025 ರಂದು ಕೃಷಿ ವಿಶ್ವವಿದ್ಯಾಲಯ, ಮಂಡ್ಯಕ್ಕೆ ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ ಕೃಷಿ ಮತ್ತು ಸಂಶೋಧನಾ ಕೇಂದ್ರ, ಪೊನ್ನಂಪೇಟೆ ಮತ್ತು ಮಡಿಕೇರಿ ಹಸ್ತಾಂತರಿಸಲಾಗಿದೆ.

Educational Centres

ಶೈಕ್ಷಣಿಕ ಕೇಂದ್ರಗಳು

The University has four educational institutions *viz.,* College of Agriculture, Navile and Iruvakki Campus, Shivamogga, College of Horticulture, Mudigere, College of Forestry, Ponnampet, College of Horticulture, Hiriyur and One Diploma College of Agriculture at Brahmavar.

ವಿಶ್ವವಿದ್ಯಾಲಯವು ಒಟ್ಟು ನಾಲ್ಕು ಶೈಕ್ಷಣಿಕ ಸಂಸ್ಥೆಗಳನ್ನು ಕೃಷಿ ಮಹಾವಿದ್ಯಾಲಯ, ನವಿಲೆ ಮತ್ತು ಇರುವಕ್ಕಿ ಆವರಣ, ಶಿವಮೊಗ್ಗ, ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ತೋಟಗಾರಿಕೆ ಮಹಾವಿದ್ಯಾಲಯ, ಹಿರಿಯೂರು ಮತ್ತು ಬ್ರಹ್ಮಾವರದಲ್ಲಿ ಒಂದು ಡಿಪ್ಲೊಮಾ ಕೃಷಿ ಕಾಲೇಜು ಒಳಗೊಂಡಿರುತ್ತದೆ.

Research Centres

ಸಂಶೋಧನಾ ಕೇಂದ್ರಗಳು

Main Agricultural and Horticultural Research Station at Iruvakki. Four Zonal Agricultural and Horticultural Research Station (ZAHRS) at Shivamogga, Hiriyur, Mudigere, Brahmavar, nine Agricultural and Horticultural Research Station at Kathalagere, Ullala, Thirthahalli, Ponnampet, Sringeri, Bavikere, Honnavile, Madikeri and Kademadkal.

ವಿಶ್ವವಿದ್ಯಾಲಯದ ನೂತನ ಆವರಣವಾದ ಇರುವಕ್ಕಿಯಲ್ಲಿ ಮುಖ್ಯ ಸಂಶೋಧನಾ ಕೇಂದ್ರವನ್ನು ಹೊಂದಿರುತ್ತದೆ. ಶಿವಮೊಗ್ಗ, ಹಿರಿಯೂರು, ಮೂಡಿಗೆರೆ, ಬ್ರಹ್ಮಾವರ ಸೇರಿದಂತೆ ಒಟ್ಟು ನಾಲ್ಕು ವಲಯ ಕೃಷಿ ಮತ್ತು ಸಂಶೋಧನಾ ಕೇಂದ್ರಗಳನ್ನು ಅಲ್ಲದೆ ಕತ್ತಲಗೆರೆ, ಉಲ್ಲಾಳ, ತೀರ್ಥಹಳ್ಳಿ, ಪೊನ್ನಂಪೇಟೆ, ಶೃಂಗೇರಿ, ಬಾವಿಕೆರೆ, ಹೊನ್ನವಿಲೆ, ಮಡಿಕೇರಿ ಮತ್ತು ಕಡೆಮಡ್ಕಲ್ ಸೇರಿ ಒಟ್ಟು ಒಂಭತ್ತು ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳನ್ನು ಒಳಗೊಂಡಿರುತ್ತದೆ.

Extension Centres

ವಿಸ್ತರಣಾ ಕೇಂದ್ರಗಳು

University has four ICAR Krishi Vigyan Kendras (KVKs) at Shivamogga, Chitradurga, Chikkamagaluru and Udupi. Two Extension Education Units at Kathalagere and Ponnampet, two Extension Units at Thirthahalli and Sringeri.

ಶಿವಮೊಗ್ಗದ ನವಿಲೆ, ಚಿತ್ರದುರ್ಗದ ಹಿರಿಯೂರು, ಚಿಕ್ಕಮಗಳೂರಿನ ಮೂಡಿಗೆರೆ ಮತ್ತು ಉಡುಪಿಯ ಬ್ರಹ್ಮಾವರ ಸೇರಿದಂತೆ ಒಟ್ಟು ನಾಲ್ಕು ಭಾ.ಕೃ.ಅ.ಪ.–ಕೆ.ವಿ.ಕೆ ಗಳನ್ನು ಒಳಗೊಂಡಿರುತ್ತದೆ. ಕತ್ತಲಗೆರೆ ಮತ್ತು ಪೊನ್ನಂಪೇಟೆಯಲ್ಲಿ ಎರಡು ವಿಸ್ತರಣಾ ಶಿಕ್ಷಣ ಘಟಕ, ತೀರ್ಥಹಳ್ಳಿ ಮತ್ತು ಶೃಂಗೇರಿಯಲ್ಲಿ ವಿಸ್ತರಣಾ ಘಟಕಗಳನ್ನು ಹೊಂದಿರುತ್ತದೆ.

Vision

- To develop technocrats, technologies, disseminators by providing a strong knowledge base
- To strengthen and excel in agricultural education, research and extension for sustainable agricultural development
- To inspire socio-cultural value-based thinking for harnessing our natural resources with a sound technical foundation

ದೂರದೃಷ್ಟಿ

- ಪ್ರಬಲವಾದ ಜ್ಞಾನದ ಮೂಲವನ್ನು ಒದಗಿಸುವ ಮೂಲಕ ತಂತ್ರಜ್ಞಾನಗಳು, ತಂತ್ರಜ್ಞರನ್ನು ಪ್ರಸರಿಸಲು ಅಭಿವೃದ್ಧಿಪಡಿಸುವುದು
- ಸುಸ್ಥಿರ ಕೃಷಿ ಅಭಿವೃದ್ಧಿಗೆ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾಕ್ಷೇತ್ರಗಳನ್ನು ಬಲಪಡಿಸುವುದು ಹಾಗು ಪರಿಣತಿಯನ್ನು ಉತ್ಕೃಷ್ಟಗೊಳಿಸುವುದು
- ನಮ್ಮಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಥ ತಂತ್ರಜ್ಞಾನದ ಆಧಾರದ ಮೇಲೆ ಬಳಸಿಕೊಳ್ಳುವುದಕ್ಕಾಗಿ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಾಧಾರಿತ ಚಿಂತನೆಗೆ ಸ್ಫೂರ್ತಿ ನೀಡುವುದು

Mission

- To build the University as a premier institution by providing the best professional education and consultancy, Research and Development solutions, addressing key issues, confronting the sector growth and achieve excellence with quality outputs in frontier areas of Agriculture, Horticulture, Forestry and allied Sciences, contract services in public and private domains at National and International level

ಸಂಸ್ಥೆಯ ಧ್ಯೇಯ

- ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿನ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಸಂಬಂಧಿತ ವಿಷಯಗಳ ಪ್ರಮುಖ ಸಮಸ್ಯೆಗಳಿಗೆ ಉತ್ತಮವಾದ ವೃತ್ತಿಪರ ಸಮಾಲೋಚನೆ, ಶಿಕ್ಷಣ, ಸಂಶೋಧನೆ ಹಾಗೂ ಅಭಿವೃದ್ಧಿಯ ಮೂಲಕ ಪರಿಹಾರವನ್ನು ಒದಗಿಸಲು, ವಿಶ್ವವಿದ್ಯಾಲಯವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ಪ್ರಮುಖ ಸಂಸ್ಥೆಯನ್ನಾಗಿ ರೂಪಿಸುವುದು

Mandate

- Imparting education towards the development of quality human resource in different branches of Agriculture, Horticulture, and Forestry and allied Sciences
- Furthering advancement of learning and conducting research in Agriculture, Horticulture, Forestry and other allied Sciences
- Undertaking the Extension Education of Science and Technologies especially for the farming and rural people of the State.
- Promoting partnership and linkages with National and International educational, research institutions and industries

ಅಧ್ಯಾದೇಶ

- ಕೃಷಿ, ತೋಟಗಾರಿಕೆ, ಅರಣ್ಯ ಹಾಗೂ ಸಂಬಂಧಿತ ವಿಜ್ಞಾನಗಳ ವಿವಿಧ ವಿಭಾಗಗಳಲ್ಲಿ ನುರಿತ ಮಾನವ ಸಂಪನ್ಮೂಲವನ್ನು ತಯಾರಿಸಲು ಉನ್ನತ ಶಿಕ್ಷಣ ನೀಡುವುದು
- ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಸಂಬಂಧಿತ ಇತರ ವಿಜ್ಞಾನಗಳಲ್ಲಿ ಸಂಶೋಧನೆ ಕೈಗೊಳ್ಳುವುದರ ಮೂಲಕ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವುದು
- ಸುಧಾರಿತ ಕೃಷಿ ತಂತ್ರಜ್ಞಾನಗಳನ್ನು ವಿಶೇಷವಾಗಿ ರಾಜ್ಯದ ಗ್ರಾಮೀಣ ಜನರಿಗೆ ವಿಸ್ತರಣಾ ಶಿಕ್ಷಣದ ಮೂಲಕ ತಲುಪಿಸುವುದು
- ರಾಷ್ಟ್ರೀಯ, ಅಂತಾರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಸಂಸ್ಥೆಗಳು ಮತ್ತು ಕೃಷಿ ಆಧಾರಿತ ಕೈಗಾರಿಕೆ/ ಉದ್ದಿಮೆಗಳೊಂದಿಗೆ ಪಾಲುದಾರಿಕೆ ಹಾಗೂ ಸಮನ್ವಯತೆಯನ್ನು ಸಾಧಿಸುವುದು


ORGANIZATIONAL STRUCTURE OF KSNUAHS, SHIVAMOGGA
Chancellor
Pro- Chancellor
Vice Chancellor
Board of Management
Comptroller
Deputy Comptroller
Asst. Comptroller
Estate Officer
Assistant Executive Engineer
Store Purchase Officer
PME Cell
Nodal Officer
Registrar
Asst. Registrar (Academic)
Asst. Admin. Officer
Administrative Officer
Legal Cell
Recruitment Cell
Asst. Admin. Officer
Director of Extension
Associate Director of Extension
Zone-4 : Chitradurga
Zone-7 : Shivamogga, Davanagere
Zone-9 : Chikkamagalur, Kodagu
Zone-10 : Udupi
ICAR-Krishi Vigyan Kendras
Shivamogga, Udupi, Chikkamagaluru and Chitthradurga
Extension Education Units
Kathalagere, Madikeri
Extension Units
Sringeri and Thirthahalli
Director of Research
Special Officer (Seeds)
Associate Director of Research
Shivamogga, Mudigere
Hiriyur and Brahmavar
MAHRS, Iruvakki
AHRSs, Bavikere, Honnvile
Ullala, Kathalagere, Madikeri
Ponnampet, Sringeri
Thirthahalli and Kademadkal
Director of Education
Dean (Post Graduation Studies)
Dean (Student Welfare)
University Librarian
Dean (Agri.), Shivamogga
Dean (Hort.), Hiriyur
Dean (Hort.), Mudigere
Dean (Forestry), Ponnampet
Special Officer, CoAs, Iruvakki
Controller of Examination
Editor, University Communication Centre
Principal, Diploma(Agri.), Brahmavar
Colleges
Zonal Agricultural & Horticultural Research Stations
Main Agricultural & Horticultural Research Station
Agricultural & Horticultural Research Stations
Cashewnut Research Station
Areca Research Station
Extension Education Units
Krishi Vigyan Kendras
Diploma College of Agriculture, Brahmavar

Highlights of the Year

ವರ್ಷದ ಮುಖ್ಯಾಂಶಗಳು

Silver Jubilee Celebration of ICAR-KVK Shivamogga and Fruits & Food Mela

ICAR-Krishi Vigyan Kendra (KVK), Shivamogga, celebrated its Silver Jubilee from 26th to 28th April, 2025, marking twenty-five years of dedicated service to the farming community. As part of the celebrations, a grand Fruits and Food Mela was organized, attracting over one lakh visitors from different parts of Karnataka. More than 150 stalls displayed fruits, processed food products, value-added agricultural commodities, traditional foods, and innovative agri-based enterprises.

The mela featured demonstrations on Integrated Farming Systems, hydroponics, vermicomposting, ornamental fish culture, beekeeping, terrace gardening, and food processing technologies. Scientists, entrepreneurs, self-help groups, and farmer organizations actively participated in showcasing technologies and products. The event served as an excellent platform for promoting value addition, agripreneurship, nutritional security and market linkages. A commemorative souvenir documenting the achievements and contributions of KVK, Shivamogga over the past twenty-five years was also released during the celebrations.

ಐಸಿಎಆರ್- ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಶಿವಮೊಗ್ಗದ ರಜತ ಮಹೋತ್ಸವದ ಸಂದರ್ಭದಲ್ಲಿ "ಹಣ್ಣು ಮತ್ತು ಆಹಾರ ಮೇಳ"

ಐಸಿಎಆರ್- ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗವು ರೈತ ಸಮುದಾಯಕ್ಕೆ ತನ್ನ 25 ವರ್ಷಗಳ ಸಮರ್ಪಿತ ಸೇವೆಯನ್ನು ಸ್ಮರಿಸುವ ನಿಟ್ಟಿನಲ್ಲಿ 26 ರಿಂದ 28 ಏಪ್ರಿಲ್ 2025 ರವರೆಗೆ ರಜತ ಮಹೋತ್ಸವವನ್ನು ಆಚರಿಸಿತು. ಈ ಸಂಭ್ರಮಾಚರಣೆಯ ಭಾಗವಾಗಿ ಆಯೋಜಿಸಲಾಗಿದ್ದ ಭವ್ಯ ಹಣ್ಣು ಮತ್ತು ಆಹಾರ ಮೇಳವು ಕರ್ನಾಟಕದ ವಿವಿಧ ಭಾಗಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಸಾರ್ವಜನಿಕರನ್ನು ಆಕರ್ಷಿಸಿತು. ಇಲ್ಲಿ 150ಕ್ಕೂ ಹೆಚ್ಚು ಮಳಿಗೆಗಳಲ್ಲಿ ಹಣ್ಣುಗಳು, ಸಂಸ್ಕರಿಸಿದ ಆಹಾರ ಉತ್ಪನ್ನಗಳು, ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು, ಸಾಂಪ್ರದಾಯಿಕ ಆಹಾರಗಳು ಮತ್ತು ನವೀನ ಕೃಷಿ ಆಧಾರಿತ ಉದ್ಯಮಗಳನ್ನು ಪ್ರದರ್ಶಿಸಲಾಯಿತು.

ಈ ಮೇಳದಲ್ಲಿ ಸಮಗ್ರ ಕೃಷಿ ಪದ್ಧತಿಗಳು, ಹೈಡ್ರೋಪೋನಿಕ್ಸ್, ಎರೆಗೊಬ್ಬರ ತಯಾರಿಕೆ, ಅಲಂಕಾರಿಕ ಮೀನು ಸಾಕಣೆ, ಜೇನುಸಾಕಣೆ, ಟೆರೇಸ್ ಗಾರ್ಡನಿಂಗ್ ಮತ್ತು ಆಹಾರ ಸಂಸ್ಕರಣಾ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು. ವಿಜ್ಞಾನಿಗಳು, ಉದ್ಯಮಿಗಳು, ಸ್ವಸಹಾಯ ಸಂಘಗಳು ಮತ್ತು ರೈತ ಸಂಘಟನೆಗಳು ತಂತ್ರಜ್ಞಾನ ಹಾಗೂ ಉತ್ಪನ್ನಗಳನ್ನು ಪ್ರದರ್ಶಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವು. ಈ ಕಾರ್ಯಕ್ರಮವು ಮೌಲ್ಯವರ್ಧನೆ, ಕೃಷಿ ಉದ್ಯಮಶೀಲತೆ, ಪೌಷ್ಟಿಕಾಂಶದ ಭದ್ರತೆ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಉತ್ತೇಜಿಸಲು ಅತ್ಯುತ್ತಮ ವೇದಿಕೆಯಾಗಿ ಕಾರ್ಯನಿರ್ವಹಿಸಿತು. ಇದೇ ಸಂದರ್ಭದಲ್ಲಿ ಕೆ.ವಿ.ಕೆ., ಶಿವಮೊಗ್ಗದ ಕಳೆದ 25 ವರ್ಷಗಳ ಸಾಧನೆ ಮತ್ತು ಕೊಡುಗೆಗಳನ್ನು ಒಳಗೊಂಡ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

Capacity Building Programme on Integrated Farming Systems

A five-day Capacity Building Programme on Integrated Farming Systems was organized by ICAR-KVK, Udupi, in collaboration with ICAR-NAARM from 19th to 23rd May at Hyderabad, 2025 under the Scheduled Caste Sub-Plan (SCSP). The programme provided practical exposure to sustainable farming models integrating crops, livestock, fisheries, horticulture, and allied enterprises. Resource persons highlighted the importance of resource recycling, diversification, and

ಸಮಗ್ರ ಕೃಷಿ ಪದ್ಧತಿಗಳ ಕುರಿತು ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ

ಪರಿಶಿಷ್ಟ ಜಾತಿ ಉಪಯೋಜನೆ (ಎಸ್ಸಿ ಎಸ್‌ಪಿ) ಅಡಿಯಲ್ಲಿ 19 ರಿಂದ 23 ಮೇ 2025 ರವರೆಗೆ ಐಸಿಎಆರ್-ನಾರ್ಮ್ ಸಹಯೋಗದೊಂದಿಗೆ ಹೈದರಾಬಾದ್‌ನ ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಉಡುಪಿಯು ಸಮಗ್ರ ಕೃಷಿ ಪದ್ಧತಿಗಳ ಕುರಿತು ಐದು ದಿನಗಳ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮವು ಬೆಳೆಗಳು, ಜಾನುವಾರು, ಮೀನುಗಾರಿಕೆ, ತೋಟಗಾರಿಕೆ ಮತ್ತು ಸಂಬಂಧಿತ ಉದ್ಯಮಗಳನ್ನು ಒಳಗೊಂಡ ಸುಸ್ಥಿರ ಕೃಷಿ ಮಾದರಿಗಳ ಪ್ರಾಯೋಗಿಕ ಜ್ಞಾನವನ್ನು ನೀಡಿತು. ಸಂಪನ್ಮೂಲ ವ್ಯಕ್ತಿಗಳು ಲಾಭದಾಯಕತೆ ಮತ್ತು ಚೇತರಿಕೆಯನ್ನು ಸುಧಾರಿಸಲು ಸಂಪನ್ಮೂಲಗಳ ಮರುಬಳಕೆ, ವೈವಿಧ್ಯೀಕರಣ ಮತ್ತು

efficient utilization of farm resources for improving profitability and resilience. Exposure visits to successful integrated farming units enabled participants to gain practical insights into sustainable agricultural practices. A total of 40 farmers benefited.

ಕೃಷಿ ಸಂಪನ್ಮೂಲಗಳ ದಕ್ಷ ಬಳಕೆಯ ಪ್ರಾಮುಖ್ಯತೆಯನ್ನು ಕುರಿತು ತಿಳಿಸಿದರು. ಯಶಸ್ವಿ ಸಮಗ್ರ ಕೃಷಿ ಘಟಕಗಳಿಗೆ ಭೇಟಿ ನೀಡುವ ಮೂಲಕ ಭಾಗವಹಿಸಿದವರು ಸುಸ್ಥಿರ ಕೃಷಿ ಪದ್ಧತಿಗಳ ಬಗ್ಗೆ ಪ್ರಾಯೋಗಿಕ ಅರಿವನ್ನು ಪಡೆದರು. ಒಟ್ಟು 40 ರೈತರು ಇದರ ಪ್ರಯೋಜನ ಪಡೆದರು.

World Honey Bee Day Celebrations

World Honey Bee Day was celebrated at ICAR-KVK, Chikkamagaluru and ZAHRS, Hiriyur to create awareness about the ecological and economic importance of honey bees on 20th May 2025 and 23rd May 2025, respectively. Scientists emphasized the crucial role of pollinators in enhancing crop productivity, biodiversity conservation, and food security. Demonstrations on scientific beekeeping, colony management, honey extraction, and value addition of bee products encouraged farmers and rural youth to adopt beekeeping as a supplementary income-generating enterprise. The event benefited 76 participants at ICAR-KVK, Chikkamagaluru, and 35 farmers and farm women at ZAHRS, Babbur Farm, Hiriyur.

ವಿಶ್ವ ಜೇನುನೊಣ ದಿನಾಚರಣೆ

